ಓಎಸ್ 299/2022

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 24.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಿಂದ**

ನಿಪಿ 17 ಫೋಟೋವು ದಾವ ಆಸ್ತಿಯ ಫೋಟೋವಾಗಿರುತ್ತದೆ ಎಂದರೆ ಸರಿ. ನಿಪಿ 17 ರಲ್ಲಿ ಟ್ರ್ಯಾಕ್ಟರ್ ಮತ್ತು ಜನಗಳು ಓಡಾಡಿರುವ ಗುರುತು ಇದೆ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯು ತಂತಿ ಬೇಲಿ ಕಿತ್ತುಹಾಕಿ ಓಡಾಡಿರುವುದು ಕಾಣುತ್ತದೆ ಮತ್ತು ಆ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ಪೊಲೀಸರು ನೀಡಿದ ಹಿಂಬರವನ್ನು ಹಾಜರುಪಡಿಸಿದ್ದೇನೆ. ನಿಪಿ 17 ರಲ್ಲಿ ಕಾಣಿಸುವ ದಾವ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಇರುವ ಖರಾಬು ಜಮೀನಲ್ಲಿರುವ ಜಾಗ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ 5 ½ ಗುಂಟೆ ಖರಾಬು ಜಮೀನು ಪಹಣಿಯಲ್ಲಿ ಬರುತ್ತಿದೆ ಎಂದರೆ ಸರಿಯಲ್ಲ. ನಿಪಿ 17, 18 ಮತ್ತು 8 ರಿಂದ 16 ಫೋಟೋಗಳು ಪ್ರತಿವಾದಿಗಳ ಜಮೀನಿಗೆ ಮತ್ತು ನಮ್ಮ ಜಮೀನಿಗೆ ಸಂಬಂಧಿಸಿದವು ಅಲ್ಲ ಎಂದರೆ ಸಾಕ್ಷಿಯು ನಿಪಿ 18 ಮತ್ತು 19 ಫೋಟೋಗಳು ನನ್ನ ಜಮೀನಿಗೆ ಸಂಬಂಧಿಸಿದವು ಎಂದು ನುಡಿಯುತ್ತಾರೆ. ನಿಪಿ 8 ರಿಂದ 13 ಫೋಟೋಗಳಲ್ಲಿ ಕಾಣುವ ದಾರಿಯು ಪ್ರತಿವಾದಿಗಳ ಜಮೀನಿಗೆ ಹೋಗುವ ದಾರಿ ಅಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ನಲ್ಲಿ ನಮೂದಿಸಿರುವ ದಾರಿಯನ್ನು ಹೊರತುಪಡಿಸಿ ಪ್ರತಿವಾದಿಗಳಿಗೆ ಅವರ ಜಮೀನಿಗೆ ಹೋಗಲು ದಾರಿ ಇಲ್ಲ ಎಂದರೆ ಸಾಕ್ಷಿಯು ಊಟಿ ಮೈಸೂರು ಮುಖ್ಯ ರಸ್ತೆಯಿಂದಲೇ ಪ್ರತಿವಾದಿಗಳ ಜಮೀನಿಗೆ ದಾರಿ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡಲು ತಪ್ಪಾಗಿ ಫೋಟೋಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ